## ಕಳೆದ ಸಂಚಿಕೆಯಲ್ಲಿ



ಬೆಟ್ಟದಂತೆ ಬಂದ ಜಿಎಸ್‌ಟಿ ಅಧಿಕಾರಿಗಳ ದಾಳಿಯ ಸಮಸ್ಯೆ ಮಂಜಿನಂತೆ ಕರಗಿಹೋಯಿತು. ಆ ಕ್ಷಣದಲ್ಲೇ, ಸಾಯಿಪ್ರಭೆಯೊಂದಿಗೆ ಮೊಮ್ಮಗನ ಮದುವೆ ಮಾಡುವ ಯೋಚನೆಯನ್ನು ಗುನ್ನಾಲಾಲ್ ಕೈಬಿಟ್ಟ. ಜಿಎಸ್‌ಟಿ ಕಮಿಷನರ್ ವಿಕ್ರಂ ದೇಶಪಾಂಡೆ ಅವರ ಮಗಳು ಪೂರ್ವಿಕಾಳ ಹುಟ್ಟುಹಬ್ಬ ಗುನ್ನಾಲಾಲ್ ಕುಟುಂಬಕ್ಕೆ ವಿಶೇಷವಾದುದಾಗಿತ್ತು. ಆಸ್ಕರ್ ವೈಲ್ಡ್ ಕಣ್ಣಿಗೆ ಅಪ್ಸರೆಯಂತೆ ಕಂಗೊಳಿಸುತ್ತಿದ್ದ ಪೂರ್ವಿಕಾ ದೇಶಪಾಂಡೆ ತನ್ನ ಕನಸಿನ ಕನ್ನಿಕೆ ಊರ್ಮಿಳಾಳಂತೆ ಅವನಿಗೆ ಕಾಣಿಸಿದಳು. ಪೂರ್ವಿಕಾಳಿಗೆ ಆಸ್ಕರ್ ಬಗ್ಗೆ ಮೃದು ಭಾವನೆಯಿರುವ ವಿಷಯವನ್ನು ತಿಳಿಸಿದ ವಿಕ್ರಂ, ಇಬ್ಬರನ್ನೂ ಎರಡು ತಿಂಗಳ ಕಾಲ ಒಟ್ಟಿಗೆ ಓಡಾಡಲು ಬಿಟ್ಟು, ನಂತರ ಒಪ್ಪಿಗೆಯಾದರೆ ಮದುವೆ ಮಾಡುವ ಪ್ರಸ್ತಾಪ ಮುಂದಿಟ್ಟರು. ಈ ಪ್ರಸ್ತಾಪ ಎಲ್ಲರಿಗೂ ಇಷ್ಟವಾಯಿತು. ಮುಂಬಯಿಯ ಚೋರ್ ಬಜಾರ್‌ನಲ್ಲಿ ಸುತ್ತುವುದರೊಂದಿಗೆ ಹೊಸ ಜೋಡಿಯ ಸುತ್ತಾಟ ಆರಂಭವಾಯಿತು. ಹೊಸ ಕಾವ್ಯಕನ್ನಿಕೆಯೊಂದಿಗಿನ ಮೊದಲ ಸುತ್ತಾಟ ವೈಲ್ಡ್ ಪಾಲಿಗೆ ಪುಳಕ ತಂದಿತ್ತು. ಇಬ್ಬರೂ ಬುರ್ಕಾ ಧರಿಸಿ ಚೋರ್ ಬಜಾರ್ ಭೇಟಿಯನ್ನು ಸ್ಮರಣೀಯವಾಗಿಸಿಕೊಳ್ಳಲು ಮುಂದಾದರು.

ನಡೆಯುತ್ತಾ ಹಣ ಒಬ್ಬರಿಂದ ಇನ್ನೊಬ್ಬರ ಅಕೌಂಟ್‌ಗೆ ಟ್ರಾನ್ಸ್‌ಫರ್ ಆಗ್ತಾ ಇರ್ತದೆ. ಇದು ಹಣದ ಲೋಕ. ಈ ಆನ್‌ಲೈನ್ ಷೇರು ವ್ಯಾಪಾರದಲ್ಲಿ ನನಗೆ ಒಂದು ರೀತಿ ಸಿಕ್ಸ್ತ್‌ಸೆನ್ಸ್ ಕೆಲಸ ಮಾಡ್ತಿದೆ ಅನ್ನಿಸುತ್ತೆ. ಏರುತ್ತಿರುವ ಷೇರುಗಳ ಬೆಲೆ ಯಾವ ಕ್ಷಣದಲ್ಲಿ ಬೀಳಬಹುದು ಹಾಗೂ ಬೀಳುತ್ತಿರುವ ಷೇರುಗಳ ಬೆಲೆ ಸಡನ್ ಆಗಿ ಯಾವಾಗ ಏರಬಹುದು ಎನ್ನುವುದನ್ನು ನನ್ನ ಮೆದುಳು ಕ್ಷಣ ಮಾತ್ರದಲ್ಲಿ ಕ್ಯಾಲಿಕ್ಯುಲೇಟ್ ಮಾಡುವ ಪರಿಗೆ ನನಗೇ ಆಶ್ಚರ್ಯವಾಗುತ್ತದೆ' ಉತ್ಸಾಹದಿಂದ ಮಾತನಾಡುತ್ತಾ ಲ್ಯಾಪ್‌ಟಾಪ್‌ನಲ್ಲಿ ಬೆರಳಾಡಿಸುತ್ತಲೇ ಇದ್ದಳು ಪೂರ್ವಿಕಾ.

'ನೀನು ಮಲ್ಟಿ ಟ್ಯಾಲೆಂಟೆಡ್. ನಾನು ಲಿಟರೇಚರ್ ಸ್ಟಡಿ ಮಾಡಿದ್ದರಿಂದ ನನಗೆ ಬೇರೆ ಸಂಗತಿಗಳಲ್ಲಿ ಅಷ್ಟೊಂದು ಆಸಕ್ತಿ ಬೆಳೆಯಲಿಲ್ಲ' ಎಂದು ಮೆಲ್ಲನೆ ಉಸುರಿದ ಆಸ್ಕರ್ ವೈಲ್ಡ್. ಅವನ ಮಾತುಗಳಿಗೆ ಪೂರ್ವಿಕಾ ದೀರ್ಘವಾದ ಉತ್ತರ ನೀಡಿದ್ದಳು: 'ಡಿಯರ್ ಸೋನಾ, ನಾನೇನು ರಾಕೇಶ್ ಜುಂಜುನ್‌ವಾಲಾ ತರ ಎಕನಾಮಿಕ್ಸ್, ಕಾಮರ್ಸ್ ಓದಿ ಚಾರ್ಟೆಡ್ ಅಕೌಂಟೆಂಟ್ ಆಗಿದ್ದೀನಾ? ಇಲ್ಲ. ಕಾಮರ್ಸ್, ಎಕನಾಮಿಕ್ಸ್ ಓದಿದೋರೆಲ್ಲಾ ಜುಂಜುನ್‌ವಾಲಾ ತರ ಆಗೋದಕ್ಕೆ ಸಾಧ್ಯಾನ? ಜುಂಜುನ್‌ವಾಲಾ ಗೊತ್ತಲ್ವಾ ನಿಂಗೆ. ಕೇವಲ ಐದು ಸಾವಿರದಿಂದ ಆತ ಷೇರು ವ್ಯಾಪಾರಕ್ಕೆ ಧುಮುಕಿದ್ದು. ಪಾಪ, ಕಾರ್ಡಿಯಾಕ್ ಅರೆಸ್ಟ್ ಆಗಿ ಇತ್ತೀಚೆಗೆ ಪ್ರಾಣ ಕಳೆದುಕೊಂಡರು. ಸತ್ತಾಗ ಜುಂಜುನ್‌ವಾಲಾ ಜಗತ್ತಿನ 438ನೇ ಶ್ರೀಮಂತರಾಗಿದ್ದರು. ಅದೆಲ್ಲಾ ಬಿಡು, ನಿನ್ನ ಬಳಿ ಇಷ್ಟೊತ್ತು ಮಾತನಾಡುತ್ತಲೇ ನಾನು ಹದಿನೆಂಟು ಸಾವಿರ ರೂಪಾಯಿ ಗಳಿಸಿದೆ' ಮುಖ ಎತ್ತಿ ಮಾತನಾಡಿದ್ದಳೀಗ ಪೂರ್ವಿಕಾ. ಅವನು ಏನೂ ಮಾತನಾಡಲು ತೋಚದೆ ಅವಳನ್ನೇ ಕಣ್ತುಂಬಿಸಿಕೊಳ್ಳುತ್ತಿದ್ದ. ಒಂದು ಗಂಟೆ ಕಾಲ ದಲಾಲ್ ಸ್ಟ್ರೀಟ್‌ನಲ್ಲಿ ಸುತ್ತಿದರು ಇಬ್ಬರು. ಪಿರೋಜ್ ಜೀಜೀಭಾಯ್ ಟವರ್ಸ್‌ನ ಜನಜಂಗುಳಿಯಲ್ಲಿ ನಡೆದಾಡಿದರು. ಮತ್ತೆ ಅಸ್ಟೋರಿಯ ಹೋಟೆಲ್ ಕಡೆ ನಡೆದಿದ್ದರು.

'ಡ್ರಿಂಕ್ಸ್ ತಗೊತೀಯ?' ತಣ್ಣಗೆ ಕೇಳಿದ್ದಳು ಪೂರ್ವಿಕಾ.

'ಓನ್ಲಿ ವೈನ್, ಅದೂ ಅಪರೂಪಕ್ಕೆ' ಅಷ್ಟೇ ತಣ್ಣಗೆ ಹೇಳಿದ್ದ ಆಸ್ಕರ್ ವೈಲ್ಡ್.

'ನಾನ್ ವೆಜ್?' ಮತ್ತೆ ಕೇಳಿದ್ದಳು.

'ಓನ್ಲಿ ಸೀ ಫಿಶ್, ಅದರಲ್ಲೂ ಅಂಜಲ್ ಮತ್ತು ಕಾಣೆ ಮಾತ್ರ. ಮನೆಯಲ್ಲಿ ಮಾಡುವುದಿಲ್ಲ. ಹೊರಗಡೆ ಮಾತ್ರ' – ಶಿಸ್ತುಬದ್ಧ ವಿದ್ಯಾರ್ಥಿಯಂತೆ ನುಡಿದಿದ್ದ. ಪೂರ್ವಿಕಾಳ ಮಾತಿನಂತೆ ಆಸ್ಕರ್ ವೈಲ್ಡ್ ಕಾರನ್ನು ಡ್ರೈವರ್ ಜೊತೆ ಕಳಿಸಿ, ತಾನು ಅವಳ ಕಾರಿನಲ್ಲಿ ಕುಳಿತಿದ್ದ. ಕಾರು ಬಾಂದ್ರ–ವೊರ್ಲಿ ಮೂಲಕ ಜುಹೂವಿನ ಮಹೇಶ್ ಲಂಚ್ ಹೋಂ ತಲುಪುವುದಕ್ಕೆ ಸರಿಯಾಗಿ ಒಂದು ಗಂಟೆಯನ್ನು ತೆಗೆದುಕೊಂಡಿತ್ತು. ಆಸ್ಕರ್ ವೈಲ್ಡ್ ಕಾರಿನಲ್ಲಿ ಮುಂಬಯಿಯನ್ನು ಸುತ್ತಿದ್ದರೂ ಇವತ್ತಿನ ಪ್ರಯಾಣ ಕೊಟ್ಟಷ್ಟು ಮುದ ಹಿಂದೆಂದೂ ಕೊಟ್ಟಿರಲಿಲ್ಲ. ಈ ಪ್ರಯಾಣದ ಮಧ್ಯ ಆಸ್ಕರ್ ವೈಲ್ಡ್ ತಾನು ಕಾಮಾಟಿಪುರ ನೋಡಿದ್ದು, ಅಲ್ಲಿನ ಅಸಹಾಯಕ ಬದುಕಿನ ಚಿತ್ರಗಳು ಅವನಲ್ಲಿ ಹುಟ್ಟಿಹಾಕಿದ್ದ ಜಿಗುಪ್ಸೆ, ಸಂಕಟ, ತಳಮಳ ಎಲ್ಲವನ್ನೂ ತೋಡಿಕೊಂಡಿದ್ದ. ಪೂರ್ವಿಕಾ ಕೂಡ ಧಾರಾವಿ ಮತ್ತು ಕಾಮಾಟಿಪುರಗಳನ್ನು ಬಾಂಬೆ ಟ್ರಿಪ್‌ನಲ್ಲಿ ನೋಡಿರುವುದಾಗಿ ಹೇಳಿದ್ದಳು. ಆಸ್ಕರ್ ವೈಲ್ಡ್ ಮೂರು ಪೆಗ್ ಐಸ್ ವೈನ್ ಕುಡಿದಿದ್ದ. ಪೂರ್ವಿಕಾ ಒಂದು ಡ್ಯುವೆಲ್ ಬಿಯರ್ ಕುಡಿದಿದ್ದಳು. ಅಂಜಲ್, ಕಾಣೆ ಫಿಶ್ ಫ್ರೈ ತುಂಬಾ ರುಚಿಕರವಾಗಿತ್ತು. ಕೊನೆಯಲ್ಲಿ ಗಡ್‌ಬಡ್ ಐಸ್‌ಕ್ರೀಮ್ ತಿಂದಿದ್ದರು. ಐಸ್‌ಕ್ರೀಮ್ ತಿನ್ನುವಾಗ ಕ್ಷಣ ಅಂಜಲಿ ದೇಸಾಯಿ ನೆನಪಾಗಿದ್ದಳು. ಐಸ್‌ಕ್ರೀಮ್ ತಿನ್ನುತ್ತಲೇ ಅವಳು ದೀರ್ಘವಾಗಿ ತನ್ನ ತುಟಿಗಳನ್ನು ಚುಂಬಿಸಿದ ಪರಿ ಈಗಲೂ ಹಚ್ಚಹಸಿರಾಗಿ ಮೆದುಳಿನ ನರನಾಡಿಗಳಲ್ಲಿ ಹರಿದಾಡುತ್ತಿರುವುದಾದರೂ ಏಕಿರಬಹುದೆಂಬ ಪ್ರಶ್ನೆಗೆ ಉತ್ತರ ಕಂಡುಕೊಳ್ಳಲು ಹೆಣಗಾಡುತ್ತಿದ್ದ. ಅವನ ಮುಖದಲ್ಲಿನ ಭಾವನೆಗಳಲ್ಲಿ ಆದ ಬದಲಾವಣೆಗಳನ್ನು ಗಮನಿಸಿದ ಪೂರ್ವಿಕಾ–

'ಏನಾಯಿತು ಸೋನಾ?' ಎಂದು ಕೇಳಿದ್ದಳು. ಅಂಜಲಿ ದೇಸಾಯಿ ಪ್ರಕರಣವನ್ನು ಹೇಳಬೇಕೆನಿಸಿದರೂ ಹೇಳಲಿಲ್ಲ.

'ಐಸ್‌ಕ್ರೀಮ್ ಬೇಕೆಂದು ನಾನು ಚಳಿಗಾಲದಲ್ಲೂ, ಮಳೆಗಾಲದಲ್ಲೂ ಹಟ ಮಾಡುತ್ತಿದ್ದೆ. ಪ್ರೈಮರಿ ಸ್ಕೂಲಿನಲ್ಲಿದ್ದಾಗ ಒಮ್ಮೆ ಅಮ್ಮ ಐಸ್‌ಕ್ರೀಮ್‌ಗೆ ಮೆಣಸಿನ ಪುಡಿ ಬೆರೆಸಿ ಕೊಟ್ಟಿದ್ದಳು. ಹದಿನೈದು ದಿನ ನಾನು ಐಸ್‌ಕ್ರೀಮ್ ಬಾಯಿಗಿಟ್ಟರಲಿಲ್ಲ. ಆ ಘಟನೆ ನೆನಪಾಗಿತ್ತು.' ಆಸ್ಕರ್ ವೈಲ್ಡನ ನಾಲಿಗೆಯ ಮೇಲೆ ಅತ್ಯಂತ ಸಹಜವಾಗಿ ಸುಳ್ಳು ನಾಟ್ಯ ಮಾಡಿತ್ತು.

'ಓಹ್ ವ್ಹಾಟ್ ಎ ಫನ್ನಿ ಮೆಮೊರಿ' ಎಂದು ನಕ್ಕಿದ್ದಳು ಪೂರ್ವಿಕಾ. ಆಸ್ಕರ್ ವೈಲ್ಡನನ್ನು ಮನೆಯ ಬಳಿ ಡ್ರಾಪ್ ಮಾಡಿ ಹೊರಟಳು. ಇನ್ನಷ್ಟು ಹೊತ್ತು ಅವಳ ಜೊತೆಯಲ್ಲಿ ಇರಬೇಕಾಗಿತ್ತು ಅನ್ನಿಸಿತ್ತು ಅವನಿಗೆ.

* * *

ಲಾಸ್ ವೆಗಾಸ್‌ಗೆ ಬೀಳ್ಕೊಡಲು ವಿಮಾನ ನಿಲ್ದಾಣಕ್ಕೆ ಗುನ್ನಾಲಾಲ್ ಮತ್ತು ವಿಕ್ರಂ ದೇಶಪಾಂಡೆ ಬಂದಿದ್ದರು. ಎಮಿರೇಟ್ಸ್ ವಿಮಾನದಲ್ಲಿ ಲಾಸ್ ವೆಗಾಸ್ ತಲುಪಲು ಇಪ್ಪತ್ತಮೂರು ಗಂಟೆಗಳು ಹಿಡಿಸಿದ್ದವು. ಮೊದಲ ಮೂರ್ನಾಲ್ಕು ಗಂಟೆಗಳು ವಿಮಾನ ಪ್ರಯಾಣ ಆಹ್ಲಾದಕರವಾಗಿದ್ದರೂ ನಂತರ ಬೋರ್ ಅನ್ನಿಸಿತ್ತು ಆಸ್ಕರ್ ವೈಲ್ಡನಿಗೆ. ವಿಮಾನದಲ್ಲಿ ಪ್ರಯಾಣಿಕರು ನಿದ್ದೆ ಮಾಡುವುದು, ಮ್ಯಾಗಜಿನ್‌ಗಳಲ್ಲಿ ಕಣ್ಣು ನೆಡುವುದು, ಲ್ಯಾಪ್‌ಟಾಪ್‌ಗಳಲ್ಲಿ ಬೆರಳಾಡಿಸುವುದು ಮುಂತಾದ ಕ್ರಿಯೆಗಳಲ್ಲಿ ತಮ್ಮಷ್ಟಕ್ಕೆ ತಾವು ತೊಡಗಿಸಿಕೊಂಡಿದ್ದರು. ಗಗನ ಸಖಿಯರು ಪ್ರಯಾಣಿಕರ ಯೋಗಕ್ಷೇಮಗಳನ್ನು ಆಗಾಗ ವಿಚಾರಿಸಿಕೊಳ್ಳುತ್ತಲೇ ಇದ್ದರು. ಪೂರ್ವಿಕಾ ಒಮ್ಮೊಮ್ಮೆ ವೈಲ್ಡನ ಭುಜದ ಮೇಲೆ ತಲೆಯಾನಿಸಿ ನಿದ್ದೆ ಮಾಡುತ್ತಿದ್ದಳು. ವೈಲ್ಡ್ ಕೂಡ ಆಗಾಗ ಪೂರ್ವಿಕಾಳ ಭುಜಕ್ಕೆ ತಲೆಯಾನಿಸಿ ತೂಕಡಿಸುತ್ತಿದ್ದ. ಆಗೆಲ್ಲಾ ಇಬ್ಬರೂ ಪರಸ್ಪರ ಪ್ರೀತಿಯಿಂದ ಕೆನ್ನೆ, ತಲೆಗೂದಲನ್ನು ನೇವರಿಸಿಕೊಳ್ಳುತ್ತಿದ್ದರು.

'ಅಮೆರಿಕದಲ್ಲಿ ಲಾಸ್ ವೆಗಾಸನ್ನೇ ಯಾಕೆ ಚೂಸ್ ಮಾಡಿದ್ದು?' ಕೇಳಿದ್ದನವನು ಅವಳ ಮುಂಗೈ ಸವರುತ್ತಾ. ಈ ಬಗ್ಗೆ ಸವಿವರವಾಗಿ ಹೇಳಲು ಪೂರ್ವಿಕಾ ಆಸ್ಕರ್ ವೈಲ್ಡನ ಕಿವಿಗಳಿಗೆ ಧ್ವನಿಯಾದಳು.

'ಡಿಯರ್ ಸೋನಾ, ಲಾಸ್ ವೆಗಾಸ್ ಒಂದು ವಿಶೇಷವಾದ, ವಿಶಿಷ್ಟವಾದ ನಗರ. ಜಗತ್ತಿನ